ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2022–23 ದಿನಾಂಕ:22.09.2022

# ಎಂ.ಎ. ಸಮಾಜಶಾಸ್ತ್ರ ಅಂತಿಮ ವರ್ಷದ ಗೃಹಲೇಖನ ಪ್ರಶ್ನೆಪತ್ರಿಕೆ 2020–21

*ವಿದ್ಯಾರ್ಥಿಗಳ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಅದನ್ನು ಗಮನವಿಟ್ಟು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದೆ.*

ಗೃಹಲೇಖನ/ಸಂಪ್ರಬಂಧದ **ವಿಷಯಗಳು** (ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಿ 2 ಸೆಟ್‌ಗಳಲ್ಲಿ ಸಲ್ಲಿಸಬೇಕು.)

## ಕೋರ್ಸ್–28ಎಫ್(ಪತ್ರಿಕೆ) – 6 : ಆಧುನಿಕ ಸಮಾಜಶಾಸ್ತ್ರಿಯ ಸಿದ್ಧಾಂತಗಳು

1. ಸಮಾಜಶಾಸ್ತ್ರೀಯ ಸಿದ್ಧಾಂತ ರೂಪಗೊಂಡ ಬಗೆಗೆಗಳನ್ನು ವಿವರಿಸಿ.
2. ಮಾನವ ಶಾಸ್ತ್ರದಲ್ಲಿ ರಚನೀಯ (ರಾಚನೀಯ) ಸಿದ್ಧಾಂತದ ಉಗಮ ಮತ್ತು ಬೆಳವಣಿಗೆಯ ಕುರಿತು ಬರೆಯಿರಿ.
3. ಇಂದ್ರಿಯಾನುಭವ ಶಾಸ್ತ್ರದ ಅಥವಾ ಫೆನಮಿನಾಲಜಿಯ ಉಗಮವನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ ಎಂಬುದನ್ನು ವಿವರಿಸಿ.
4. ಗಿಡಿನ್ಸ್ ಅವರ ರಚನೀಕರಣದ ಸಿದ್ಧಾಂತ ಕುರಿತು ಬರೆಯಿರಿ.
5. ಸಾಮಾಜಿಕ ಕ್ರಿಯಾ ಸಿದ್ಧಾಂತ ವಿವಿಧ ದೃಷ್ಟಿಕೋನಗಳನ್ನು ಅರ್ಥೈಸಿ ಬರೆಯಿರಿ.

## ಕೋರ್ಸ್–28ಜಿ(ಪತ್ರಿಕೆ) – 7 : ಅಭಿವೃದ್ಧಿ ಸಮಾಜಶಾಸ್ತ್ರ

1. ಸಾಮಾಜಿಕ ಸನ್ನಿವೇಶ ಮತ್ತು ಅಭಿವೃದ್ಧಿಗೆ ಇರುವ ಸಂಬಂಧವನ್ನು ವಿಶ್ಲೇಷಿಸಿ.
2. ಅಭಿವೃದ್ಧಿ ಸಿದ್ಧಾಂತವೆಂದರೇನು? ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅದರ ಪಾತ್ರ ಹಾಗೂ ರೂಪರೇಶೆಗಳನ್ನು ವಿವರಿಸಿ.
3. ಸಮಾಜಶಾಸ್ತ್ರಿಯ ಹಿನ್ನೆಲೆಯಲ್ಲಿ ಆಹಾರ, ಅಧಿಕಾರ ಹಾಗೂ ಬಡತನದ ಸಂಬಂಧ ಕುರಿತು ವಿಶ್ಲೇಷಿಸಿ.
4. ಅಭಿವೃದ್ಧಿ ಪರಿಕಲ್ಪನೆ ಕುರಿತು ಅರಿಸ್ಟಾಟಲ್‌ನಿಂದ ಆರಂಭವಾಗಿ ಅಡಮ್‌ಸ್ಮಿತ್, ಇಮ್ಯಾನುಯಲ್ ಕಾಂಟ್ ಹಾಗೂ ಕಾರ್ಲ್‌ಮಾರ್ಕ್ಸ್‌ವರೆಗಿನ ಸಮಾಜಿಕ ಚಿಂತಕರ ವಿಶ್ಲೇಷಣೆಯನ್ನು ವಿವರಿಸಿ.
5. ಕ್ರಾಂತಿಕಾರಿ ಪರಿಸರವಾದಿಗಳ ಆಲೋಚನಾ ಕ್ರಮಗಳನ್ನು ವಿಶ್ಲೇಷಣಾತ್ಮಕವಾಗಿ ಬರೆಯಿರಿ.

## ಕೋರ್ಸ್–28ಎಚ್(ಪತ್ರಿಕೆ) – 8 : ವೈದ್ಯಕೀಯ ಸಮಾಜಶಾಸ್ತ್ರ

1. ಆರೋಗ್ಯ ಕುರಿತಾದ ಸಮಾಜಶಾಸ್ತ್ರೀಯ ಅಧ್ಯಯನವನ್ನು ಕುರಿತು ಬರೆಯಿರಿ.
2. ವೈದ್ಯರ ಸಾಮಾಜಿಕರಣ ಪ್ರಕ್ರಿಯೆಯ ಅಂಶಗಳನ್ನು ವಿವರಿಸಿ.
3. 'ಆಸ್ಪತ್ರೆಗಳು ಸಾಮಾಜಿಕ ಸಂಘಟನೆಗಳು' ಎಂಬುದನ್ನು ಅರ್ಥಮಾಡಿಕೊಳ್ಳುವುದರೊಟ್ಟಿಗೆ ಆಸ್ಪತ್ರೆಗಳ ವಿಷಯಾಂಗಗಳನ್ನು ವಿವರಿಸಿ.
4. ಅಲ್ಮಾ–ಆಟ ಘೋಷಣೆಯ ಪ್ರಮುಖ ಅಂಶಗಳನ್ನು ವಿವರಿಸಿ.
5. ಆರೋಗ್ಯ ಸೂಚಕಗಳಲ್ಲಿ ಲಿಂಗ ಸಂಬಂಧಿ ಅಸಮಾನತೆಗಳ ಸ್ವರೂಪವನ್ನು ವಿವರಿಸಿ.

## ಕೋರ್ಸ್–28ಐ(ಪತ್ರಿಕೆ) – 9 : ಸಾಮಾಜಿಕ ನೀತಿ ಮತ್ತು ಯೋಜನೆ

1. ಸಾಮಾಜಿಕ ವಿನ್ಯಾಸದ ವಿವಿಧ ಚಿಂತನೆಗಳನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಬರೆಯಿರಿ.
2. ಸರ್ಕಾರೇತರ ಸಂಸ್ಥೆಯ ನಿರ್ವಹಣೆಯಲ್ಲಿನ ಸಾಧಕ ಬಾಧಕಗಳನ್ನು ವಿಶ್ಲೇಷಣಾತ್ಮಕವಾಗಿ ಬರೆಯಿರಿ.
3. ಸ್ವಾತಂತ್ರ್ಯ ಪೂರ್ವ ಭಾರತದ ಸಾರ್ವತ್ರಿಕ ಕಾನೂನುಗಳು ಹಂತಹಂತವಾಗಿ ವಿಕಾಸಗೊಂಡ ಬಗೆಗಳನ್ನು ಬರೆಯಿರಿ.
4. ಗ್ರಾಮ ಮತ್ತು ನಗರ ಯೋಜನೆಗಳ ರೂಪುರೇಶಗಳನ್ನು ವಿವರಿಸಿ.
5. ಕಾರ್ಯಕ್ರಮ ಯೋಜನಾ ಅನುಷ್ಠಾನ ಮತ್ತು ಸಾಮರ್ಥ್ಯ ಬಲವರ್ಧನೆಯನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವಿವರಿಸಿ.

## ಕೋರ್ಸ್–28ಜೆ(ಪತ್ರಿಕೆ) – 10 : ಸಮಾಜ ಮತ್ತು ಜಾಗತೀಕರಣ

1. 'ಜಾಗತೀಕರಣ' ಎಂಬುದು ಕೇವಲ 20–21ನೇ ಶತಮಾನದ ವಿದ್ಯಾಮಾನವಲ್ಲ. ಅದು ನೂರಾರು ವರ್ಷಗಳ ಇತಿಹಾಸವನ್ನು ಹೊಂದಿದೆ ಎಂಬ ಅಂಶವನ್ನು ಕುರಿತು ಚಾರಿತ್ರಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ವಿವರಿಸಿ.
2. ಜಾಗತೀಕರಣದ ಪರಿಣಾಮ ಮತ್ತು ಪ್ರಭಾವವನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
3. ಜಾಗತೀಕರಣ ಸಂಹಿತೆಗಳಾದ ತಡೆರಹಿತ ಸ್ವಾತಂತ್ರ್ಯ, ವ್ಯಕ್ತಿವಾದ, ಕೊಳ್ಳುಬಾಕತನ ಮುಂತಾದ ವಿಷಯಗಳ ಕುರಿತು ವಿಶ್ಲೇಷಿಸಿ ಬರೆಯಿರಿ.
4. ರಾಷ್ಟ್ರದ ಒಳಗೆ ಮತ್ತು ರಾಷ್ಟ್ರಗಳ ನಡುವಿನ ಅಸಮಾನತೆಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುದನ್ನು ವಿವರಿಸಿ.
5. ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಜಾಗತೀಕರಣದ ಪರಿಣಾಮ ಕುರಿತು ಬರೆಯಿರಿ.

22/9/22

ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ